ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 89-95
©*IIMRD*, Mysuru
www.iimrd.com

# ಭೂರಹಿತ ಕೃಷಿ ಕಾರ್ಮಿಕರ ಸ್ಥಿತಿಗತಿ: ಒಂದು ಅಧ್ಯಯನ

**ಡಾ. ನಯಾಜ್ ಅಹ್ಮದ್**
ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಶಿವಮೊಗ್ಗ

**ಸಾರಾಂಶ: (Abstract)**

*ಕೃಷಿ ಕಾರ್ಮಿಕರು ದುಡಿಯುವುದು ಕೃಷಿ ಭೂಮಿಯಲ್ಲಿ ಹಾಗೂ ಕೃಷಿ ಸಂಬಂಧಿತವಾದ ಉದ್ಯೋಗಗಳಲ್ಲಿ. ಕೃಷಿ ಎಂಬುದು ಗ್ರಾಮ ಸಮುದಾಯದ ಪ್ರಧಾನ ಜೀವನಾಧಾರವಾಗಿದ್ದು ಬಹುಕಾಲದವರೆಗೆ "ಭಾರತದ ಆರ್ಥಿಕತೆಯ ಬೆನ್ನೆಲುಬು" ಎಂಬ ಮಾನ್ಯತೆಯನ್ನು ಪಡೆದಿತ್ತು. ಆಶ್ಚರ್ಯವೆಂಬಂತೆ ಸ್ವಾತಂತ್ರ್ಯ ಬಂದ 80ವರ್ಷಗಳ ನಂತರವೂ ದೇಶದ ಬಹುದೊಡ್ಡ ಸಂಖ್ಯೆಯ ಜನರು ಕೃಷಿಯನ್ನೇ ತಮ್ಮ ಜೀವನೋಪಾಯದ ಮಾರ್ಗವನ್ನಾಗಿ ಮಾಡಿಕೊಂಡು ಅದನ್ನೇ ಅವಲಂಬಿಸಿಕೊಂಡಿದ್ದಾರೆ. ಕೃಷಿ ಸಂಬಂಧಿತ ಉದ್ಯೋಗಗಳಲ್ಲಿ ದುಡಿಯುವ ಕೃಷಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಾಳಿ ಬದುಕುತ್ತಿರುವುದು ಗ್ರಾಮಗಳಲ್ಲಿ. ಪ್ರಸ್ತುತ ಅಧ್ಯಯನವು ಭೂರಹಿತ ಕೃಷಿಕಾರ್ಮಿಕರ ಸ್ಥಿತಿಗತಿಯನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಅತ್ತಿಮೊಗ್ಗೆ ಗ್ರಾಮದ 50 ಜನ ಭೂರಹಿತ ಕೃಷಿಕಾರ್ಮಿಕರನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ಭೂರಹಿತ ಕೃಷಿಕಾರ್ಮಿಕರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯ ಮೇಲೆ ಬೆಳಕು ಚಲ್ಲುವುದಾಗಿದೆ.*

**ಮುಖ್ಯಪದಗಳು (Keywords):** *ಗ್ರಾಮಗಳ ಸಾಮಾಜಿಕ ರಚನೆ, ಆರ್ಥಿಕ ರಚನೆ, ಕೃಷಿಕಾರ್ಮಿಕರು, ಭೂರಹಿತ ಕೃಷಿ ಕಾರ್ಮಿಕರು*

## ಪೀಠಿಕೆ

ಯುಗ–ಯುಗಾಂತರದಿಂದಲೂ ಭಾರತದಲ್ಲಿ ಗ್ರಾಮಗಳ ಹಾಗೂ ಕೃಷಿಯ ಪ್ರಾಧಾನ್ಯತೆ ಕಂಡುಬರುತ್ತದೆ. ಋಗ್ವೇದದ ಸಾಹಿತ್ಯದಲ್ಲಿಯೂ ಗ್ರಾಮಗಳ ಉಲ್ಲೇಖವಿದೆ. ಗಾಮಗಳು ಪರಂಪರಾಗತವಾಗಿ ಹಾಗೂ ಭಾವನಾತ್ಮಕವಾಗಿ ಭಾರತೀಯರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಜೀವನದೊಂದಿಗೆ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಜಾತಿವ್ಯವಸ್ಥೆ, ಅವಿಭಕ್ತ ಕುಟುಂಬ ಹಾಗೂ ಗ್ರಾಮೀಣ ಜೀವನ ವ್ಯವಸ್ಥೆ ಇವು ಮೂರನ್ನು "ಭಾರತೀಯ ಸಮಾಜದ ಆಧಾರ ಸ್ಥಂಬಗಳೆಂದು" ಕರೆಯುವುದಿದೆ. ಇತಿಹಾಸದ ಏಳುಬೀಳುಗಳಿಗೆ ಸಾಕ್ಷಿಯಾಗಿದ್ದುಕೊಂಡು ಗ್ರಾಮಗಳು ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಗ್ರಾಮಗಳೇ ಭಾರತದ ನಿಜವಾದ ಪ್ರತಿನಿಧಿಗಳು ಎನ್ನುವಷ್ಟರ ಮಟ್ಟಿಗೆ ದೇಶದ ಬಹುಸಂಖ್ಯಾತರು ಇಂದಿಗೂ

*Please cite this article as:* ನಯಾಜ್ ಅಹ್ಮದ್. (2026). ಭೂರಹಿತ ಕೃಷಿ ಕಾರ್ಮಿಕರ ಸ್ಥಿತಿಗತಿ: ಒಂದು ಅಧ್ಯಯನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 89–95

ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ 80ವರ್ಷಗಳ ನಂತರವೂ ದೇಶದ ಬಹುದೊಡ್ಡ ಸಂಖ್ಯೆಯ ಜನರು ಕೃಷಿಯನ್ನೇ ತಮ್ಮ ಜೀವನೋಪಾಯದ ಮಾರ್ಗವನ್ನಾಗಿ ಮಾಡಿಕೊಂಡು ಅದನ್ನೇ ಅವಲಂಬಿಸಿಕೊಂಡಿದ್ದಾರೆ. ಕೃಷಿ ಸಂಬಂಧಿತ ಉದ್ಯೋಗಗಳಲ್ಲಿ ದುಡಿಯುವ ಕೃಷಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಾಳಿ ಬದುಕುತ್ತಿರುವುದು ಗ್ರಾಮಗಳಲ್ಲಿ.

**ಭಾರತದ ಗ್ರಾಮೀಣ ಸಾಮಾಜಿಕ ರಚನೆ**

ಭಾರತವು ಪರಂಪರಾಗತವಾಗಿ ಗ್ರಾಮಗಳ ದೇಶವಾಗಿದೆ. ಇಲ್ಲಿನ ಬಹುತೇಕ ಜನರ ಜೀವನ ಗ್ರಾಮಗಳ ಸುತ್ತ ಹೆಣೆದುಕೊಂಡಿದೆ. ಗ್ರಾಮ, ಜಾತಿ ಹಾಗೂ ಅವಿಭಕ್ತ ಕುಟುಂಬವನ್ನು "ಭಾರತದ ಸಾಮಾಜಿಕ ರಚನೆಯ ಆಧಾರಸ್ತಂಭಗಳೆಂದು" ಕರೆಯುವುದಿದೆ. ದೇಶದ ಬಹುತೇಕ ಜನರು ಇಂದಿಗೂ ಗ್ರಾಮಗಳಲ್ಲೇ ವಾಸಿಸುತ್ತಿದ್ದಾರೆ. 1991ರ ಜನಗಣತಿಯಂತೆ ದೇಶದ ಒಟ್ಟು ಜನಸಂಖ್ಯೆಯ 74.28% , 2001ರಲ್ಲಿ 72% ಹಾಗೂ 2011ರ ಜನಗಣತಿಯ ಪ್ರಕಾರ 68.8% ಜನರು ಇಂದಿಗೂ ಗ್ರಾಮಗಳಲ್ಲೇ ವಾಸಿಸುತ್ತದ್ದಾರೆ. ಇಂದಿನ ಎಡೆಬಿಡದ ಸಾಮಾಜಿಕ ಆರ್ಥಿಕ ಪರಿವರ್ತನೆಗಳ ಹೊರತಾಗಿಯೂ ಗ್ರಾಮೀಣ ಪ್ರಾಭಲ್ಯ ಇಂದಿಗೂ ಮುಂದುವರೆದಿದೆ.

ಭಾರತದಲ್ಲಿ ಗ್ರಾಮೀಣ ಪ್ರದೇಶದ ಗಾತ್ರ ಹಾಗೂ ಗ್ರಾಮೀಣ ಜನಸಂಖ್ಯೆಯ ಗಾತ್ರ ಎರಡೂ ದೃಷ್ಟಿಗಳಿಂದಲೂ ಗ್ರಾಮಗಳ ಪ್ರಾಭಲ್ಯ ಇಂದಿಗೂ ಮುಂದುವರೆದಿದೆ. ಉದಾ: ಭಾರತದ ಒಟ್ಟು ವಿಸ್ತೀರ್ಣ 3,287,762 ಚ.ಕಿಲೋಮೀಟರಷ್ಟಿದೆ. 2001ರ ಅಂಕಿಅಂಶಗಳಂತೆ ಇದರಲ್ಲಿ ಗ್ರಾಮೀಣ ಪ್ರದೇಶದ್ದು ಸಿಂಹಪಾಲು, ಅಂದರೆ 3.160.597 ಚ.ಕಿಲೋಮೀಟರಷ್ಟಿದೆ. ಕೇವಲ 43.606 ಚ.ಕಿ.ಮಿ.ಮೀ ಪ್ರದೇಶ ಮಾತ್ರ ನಗರ ಪ್ರದೇಶ ಎನಿಸಿಕೊಂಡಿದೆ. ಸುಮಾರು 833 ದಶಲಕ್ಷದಷ್ಟಿರುವ ಭಾರತದ ಗ್ರಾಮೀಣ ಜನಸಂಖ್ಯೆ ದೇಶದಾದ್ಯಂತ ಇರುವ 6.40ಲಕ್ಷ ಗ್ರಾಮಗಳಲ್ಲಿ ಹಂಚಿಹೋಗಿದ್ದಾರೆ. ಜಗತ್ತಿನಾದ್ಯಂತ ನಗರೀಕರಣ ಭಾರೀ ವೇಗದಿಮದ ಸಾಗುತ್ತಿದ್ದರೂ ಭಾರತಕ್ಕೆ ಮಾತ್ರ ಅದರ ಬಿಸಿ ಅಷ್ಟಾಗಿ ತಟ್ಟಿದಂತಿಲ್ಲ. ಉದಾ: 1901ರಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ನಗರದ ಪಾಲು ಕೇವಲ 10.8%ಇದ್ದದ್ದು, 1981ರ ವೇಳೆಗೆ 23.3%ಗೆ ಮಾತ್ರ ಏರಿಕೆಯಾಗಿತ್ತು. 2011ರ ವೇಳೆಗೆ ಅದಿ ಶೇಕಡ 31.2 ರಷ್ಟಕ್ಕೆ ಮಾತ್ರ ಏರಿಕೆಯಾಗಿತ್ತು. ಆದರೆ ತುಲನಾತ್ಮಕವಾಗಿ ಹೇಳ ಬೇಕಾದರೆ.ಹಳ್ಳಿಗಳಿಂದ ಗಣನೀಯ ಸಂಖ್ಯೆಯ ಜನರನ್ನು ಸೆಳೆಯಲು 2022ರ ಕಾಲಘಟ್ಟದಲ್ಲಿಯೂ ಭಾರದತ ನಗರಗಳು ವಿಫಲವಾಗಿವೆ.

**ಗ್ರಾಮಗಳ ಆರ್ಥಿಕ ರಚನೆ**

ಗ್ರಾಮಗಳ ಆರ್ಥಿಕ ರಚನೆ ಎಂದರೆ ಅದು ಕೃಷಿ–ಉದ್ಯೋಗ ಸಂಬಂಧಿತವಾದ ಸಂರಚನೆಯಲ್ಲದೇ ಬೇರೇನಲ್ಲ. ಗ್ರಾಮಗಳಲ್ಲಿ ದೊಡ್ಡ ಹಾಗೂ ಸಣ್ಣ ಜಮೀನ್ದಾರರು, ಸಣ್ಣ ಹಾಗೂ ಅತೀಸಣ್ಣ ಹಿಡುವಳಿದಾರರೂ ಹಾಗೂ ಕೃಷಿ ಕೂಲಿಕಾರರು ಹಾಗೂ ಕುಶಲಕರ್ಮಿಗಳು ಇವರುಗಳ ಒಳಗಿನ ಸಂಬಂಧಗಳ ಹೆಣಿಗೆಯನ್ನೇ ಗ್ರಾಮದ ಆರ್ಥಿಕ ರಚನೆಯ ಸ್ವರೂಪವನ್ನು ನಿರ್ಧರಿಸುವುದು. 2011ರ ಮಾಹಿತಿಯಂತೆ ದೇಶದ ಒಟ್ಟು ರಫ್ತು ಆದಾಯದಲ್ಲಿ ಕೃಷಿಯ ಭಾಗ ಶೇ.14ರಷ್ಟಿದ್ದು ದೇಶದ ಒಟ್ಟು ಶ್ರಮಿಕ ವರ್ಗದಲ್ಲಿ ಶೇಕಡ 58 ಭಾಗದ ಜನರಿಗೆ ಕೃಷಿಯೇ ಉದ್ಯೋಗವನ್ನೊದಗಿಸುತ್ತದೆ. ಗ್ರಾಮಗಳಲ್ಲಿರುವ ಜನರು

ಒಂದಲ್ಲಾ ಒಂದು ರೀತಿಯಲ್ಲಿ ಕೃಷಿಯನ್ನು ಅವಲಂಬಿಸಿಯೇ ಜೀವಿಸುತ್ತಾರೆ. ದೇಶದ ಒಟ್ಟು ಜನಸಂಖ್ಯೆಯ ಸುಮಾರು 60–65ರಷ್ಟು ಜನ ಇಂದಿಗೂ ಕೃಷಿಯನ್ನು ನೆಚ್ಚಿಕೊಂಡಿದ್ದಾರೆ. ಭಾರತೀಯ ಗ್ರಾಮಗಳ ಹೆಚ್ಚಿನ ಕೃಷಿಕರು ಬಡವರು ಹಾಗೂ ಸಣ್ಣ ಹಿಡುವಳಿದಾರರು. ಇವರ ನಡುವೆ ಕೆಲವರು ಶ್ರೀಮಂತರೂ ಇದ್ದು ಗ್ರಾಮೀಣ ಅಸಮಾನತೆಗೂ ಅವಕಾಶವಿದೆ. ಈ ಸ್ಥಿತಿಯಲ್ಲಿ ಈಗಲೂ ಭಾರೀ ಬದಲಾವಣೆಯಾಗಿಲ್ಲ.

**ಕೃಷಿ ಕಾರ್ಮಿಕರು**

ಕೃಷಿ ಉದ್ಯಮಕ್ಕೆ ಸಂಬಂಧಿಸಿದ ಬೇಸಾಯ, ನಾಟಿಮಾಡುವಿಕೆ, ರಸಗೊಬ್ಬರ ಹಾಕುವುದು, ಕಳೆ ಕೀಳುವುದು, ಔಷಧಿ ಸಿಂಪಡಿಸುವುದು, ಕಟಾವು ಮಾಡುವುದು, ಧಾನ್ಯ ಬೇರ್ಪಡಿಸುವಿಕೆ ಇವೇ ಮುಂತಾದ ಕೃಷಿ ಕಾರ್ಯಗಳಲ್ಲಿ ತೊಡಗಿಕೊಂಡು ದಿನಗೂಲಿ ಅಥವಾ ಮಾಸಿಕ ವೇತನದ ನೆಲೆಯಲ್ಲಿ ದುಡಿಯುವ ಕಾರ್ಮಿಕರನ್ನು ಕೃಷಿ ಕಾರ್ಮಿಕರು ಎನ್ನಬಹುದು. ಗ್ರಾಮೀಣ ಭಾರತದ ಮುಖ್ಯ ಜೀವನಾಧಾರ ಕೃಷಿ ಕಾರ್ಯಗಳು ನಡೆಯುವುದೇ ಕೃಷಿ ಕಾರ್ಮಿಕರ ಸಹಾಯದಿಂದ. ಅವರೇ ಕೃಷಿ ಉದ್ಯಮದ ಜೀವಾಳ.

**ಭೂರಹಿತ ಕೃಷಿ ಕಾರ್ಮಿಕರು**

ಯಾವುದೇ ಭೂ ಹಿಡುವಳಿಯ ಒಡೆತನ ಹೊಂದಿರದ ಮತ್ತು ದಿನಗೂಲಿ ಅಥವಾ ಮಾಸಿಕ ವೇತನದ ನೆಲೆಯಲ್ಲಿ ದುಡಿಯುವ ಕೃಷಿ ಕಾರ್ಮಿಕರನ್ನು ಭೂರಹಿತ ಕೃಷಿ ಕಾರ್ಮಿಕರು ಎನ್ನಲಾಗಿದೆ. ಇವರ ಸಂಖ್ಯೆ ಗ್ರಾಮೀಣ ಭಾಗದ ಒಟ್ಟು ಕೃಷಿ ಕಾರ್ಮಿಕರಲ್ಲಿ ಕನಿಷ್ಟ ಶೇಕಡ 60ರಷ್ಟಿದೆ. ಇತ್ತೀಚಿನ ದಿನಗಳಲ್ಲಿ ಇವರ ಸಂಖ್ಯೆ ಕಡಿಮೆಯಾಗುತ್ತಿದೆ. ಭೂರಹಿತ ಕೃಷಿ ಕಾರ್ಮಿಕರು ತಮ್ಮದೇ ಆದ ಕೃಷಿ ಭೂಮಿಯನ್ನು ಹೊಂದಿಲ್ಲದೇ ಇದ್ದರೂ ಇತರ ವ್ಯಕ್ತಿಗಳಿಗೆ ಸೇರಿದ ಕೃಷಿ ಭೂಮಿಯಲ್ಲಿ ದಿನಗೂಲಿ ವೇತನದ ನೆಲೆಯಲ್ಲಿ ಶ್ರಮಿಕರಾಗಿ ದುಡಿಯುತ್ತಾರೆ. ಇವರ ಉದ್ಯೋಗ ಹಾಗೂ ಅಸ್ತಿತ್ವ ಇತರರ ಒಡೆತನದಲ್ಲಿರುವ ಕೃಷಿ ಭೂಮಿಯನ್ನು ಅವಲಂಬಿಸಿರುತ್ತದೆ.

**ಅಧ್ಯಯನದ ಮಹತ್ವ:**

- ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು.
- ಕೃಷಿ ಚಟುವಟಿಕೆಗಳಿಗೆ ದೈಹಿಕ ಶ್ರಮದ ಪೂರೈಕೆ.

**ಅಧ್ಯಯನದ ಉದ್ದೇಶಗಳು:**

- ಭೂರಹಿತ ಕೃಷಿಕಾರ್ಮಿಕರ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ತಿಳಿಯುವುದು.
- ಭೂರಹಿತ ಕೃಷಿ ಕಾರ್ಮಿಕರ ಸಮಸ್ಯೆ ಮತ್ತು ಸವಾಲುಗಳನ್ನು ತಿಳಿಯುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು:**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ/ದತ್ತಾಂಶ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ಸಾಧನಗಳನ್ನು ಬಳಸಿಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳೆರಡರಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕ್ಷೇತ್ರ ಕಾರ್ಯವನ್ನು ಕೈಗೊಂಡು ಸಂಶೋಧನೆಗೆ ಅಗತ್ಯವಿರುವ

ಮಾಹಿತಿಯನ್ನು ಅವಲೋಕನ ಹಾಗೂ ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಸಂದರ್ಶಿತರನ್ನು ಭೇಟಿಮಾಡಿ ನಾವೇ ಅವರಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಅಧ್ಯಯನ ಕಾರ್ಯಕ್ಷೇತ್ರ ಮತ್ತು ಜನಸಂಖ್ಯಾ ಮಾದರಿಯ ಆಯ್ಕೆ:**

ಪ್ರಸ್ತುತ ಅಧ್ಯಯನವು ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ ತಾಲ್ಲೂಕಿನ ಅತ್ತಿಮೊಗ್ಗೆ ಗ್ರಾಮವನ್ನು ಆಯ್ಕೆಮಾಡಿಕೊಳ್ಳಲಾಗಿದೆ ಈ ಗ್ರಾಮದಲ್ಲಿ 350ಕ್ಕೂ ಅಧಿಕ ಕುಟುಂಬಗಳಿವೆ. ಇಲ್ಲಿನ ಪ್ರಧಾನ ಉದ್ಯೋಗ ಕೃಷಿಯಾಗಿದೆ. ಈ ಗ್ರಾಮದಲ್ಲಿರುವ 50 ಜನ ಭೂರಹಿತ ಕೃಷಿ ಕಾರ್ಮಿಕರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

## ಮಾಹಿತಿ ವಿಶ್ಲೇಷಣೆ

**ಕೋಷ್ಟಕ 01: ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದ ವಿವರ**

| **ವಯಸ್ಸು** | **ಆವೃತ್ತಿ** | **ಸರಾಸರಿ** |
|---|---|---|
| 25 ರಿಂದ 35 ವರ್ಷ | 10 | 20% |
| 35 ರಿಂದ 45 ವರ್ಷ | 15 | 30% |
| 45 ರಿಂದ 55 ವರ್ಷ | 20 | 40% |
| 55 ವರ್ಷ ಮೇಲ್ಪಟ್ಟವರು | 05 | 10% |
| **ಒಟ್ಟು** | **50** | **100.00%** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ವಯಸ್ಸಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು, 25 ರಿಂದ 35 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 20 ಇದ್ದು, 35 ರಿಂದ 45 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 15 ಇದ್ದು, 45 ರಿಂದ 55 ವರ್ಷ ವಯಸ್ಸಿನವರ ಪ್ರಮಾಣ ಶೇಕಡ 40 ಇದ್ದು, 55 ವರ್ಷ ಮೇಲ್ಪಟ್ಟ ವಯಸ್ಸಿನವರು ಶೇಕಡ 10ರಷ್ಟಿದ್ದಾರೆ. ಕೃಷಿ ಕಾರ್ಯಗಳು ಹೆಚ್ಚು ದೈಹಿಕ ಶ್ರಮದವಾಗಿರುವುದರಿಂದ ವಯಸ್ಸು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ ಇಲ್ಲಿ 35 ರಿಂದ 45 ಹಾಗೂ 45 ರಿಂದ 55 ವರ್ಷ ವಯಸ್ಸಿನವರ ಪ್ರಮಾಣವೇ ಅಧಿಕವಾಗಿದೆ..

**ಕೋಷ್ಟಕ 02: ಮಾಹಿತಿದಾರರ ಜಾತಿಗೆ ಸಂಬಂಧಿಸಿದ ವಿವರ**

| **ಜಾತಿಯ ವಿವರ** | **ಆವೃತ್ತಿ** | **ಸರಾಸರಿ** |
|---|---|---|
| ಪರಿಶಿಷ್ಟ ಜಾತಿ | 25 | 50.00% |
| ಪರಿಶಿಷ್ಟ ಜನಾಂಗ | 15 | 30.00% |
| ಮುಸಲ್ಮಾನರು | 05 | 10.00% |
| ಇತರೆ | 05 | 10.00% |
| **ಒಟ್ಟು** | **50** | **100.00%** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಜಾತಿ/ಧರ್ಮಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು ಪರಿಶಿಷ್ಟ ಜಾತಿಯ ಶೇಕಡ 50ರಷ್ಟು, ಪರಿಶಿಷ್ಟ ಪಂಗಡದ ಶೇಕಡ 30ರಷ್ಟು, ಮುಸಲ್ಮಾನರು ಶೇಕಡ 10ರಷ್ಟು ಹಾಗೂ ಇತರೆ ಜಾತಿಯವರು ಶೇಕಡ 10ರಷ್ಟು ಜನರು ಕಂಡು ಬಂದಿದ್ದಾರೆ. ಕಾರಣ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮುಸಲ್ಮಾನರು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿದ್ದು ಕೃಷಿ ಕೂಲಿಯನ್ನೇ ತಮ್ಮ ಜೀವನಾಧಾರವನ್ನಾಗಿ ಮಾಡಿಕೊಂಡಿದ್ದಾರೆ.

**ಕೋಷ್ಟಕ 03: ಮಾಹಿತಿದಾರರ ಲಿಂಗಕ್ಕೆ ಸಂಬಂಧಿಸಿದ ವಿವರ**

| **ಲಿಂಗದ ವಿವರ** | **ಆವೃತ್ತಿ** | **ಸರಾಸರಿ** |
|---|---|---|
| ಪುರುಷರು | 05 | 10.00% |
| ಮಹಿಳೆಯರು | 45 | 90.00% |
| ಇತರೆ | 00 | 00.00% |
| **ಒಟ್ಟು** | **50** | **100.00%** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಲಿಂಗಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು ಪುರುಷ ಕಾರ್ಮಿಕರು ಶೇಕಡ 10ರಷ್ಟು ಕಂಡು ಬಂದಿದ್ದಾರೆ. ಮಹಿಳಾ ಕಾರ್ಮಿಕರು ಶೇಕಡ 90ರಷ್ಟು ಕಂಡು ಬಂದಿದ್ದಾರೆ. ಕಾರಣ ಕಡಿಮೆ ದೈಹಿಕ ಶ್ರಮದ ಕೆಲಸಗಳಾದ ಕಳೆ ಕೀಳುವುದು, ಫಸಲು ಕೋಯ್ಯುವುದು ಇವೆಲ್ಲವೂ ಹೆಚ್ಚು ಹೆಚ್ಚಾಗಿ ಮಹಿಳೆಯರೇ ಮಾಡುವ ಕೆಲಸಗಳಾಗಿರುವುದರಿಂದ ಹಾಗೂ ಕೂಲಿ ಕಡಿಮೆಯಿರುವುದರಿಂದ ಮಹಿಳೆಯರ ಪ್ರಮಾಣವೇ ಅಧಿಕವಾಗಿ ಕಂಡುಬಂದಿದೆ.

**ಕೋಷ್ಟಕ 04 ಕೃಷಿ ಉದ್ಯೋಗದ ವಿವರ**

| **ಕೃಷಿ ಉದ್ಯೋಗದ ವಿವರ** | **ಆವೃತ್ತಿ** | **ಸರಾಸರಿ** |
|---|---|---|
| ಋತುಮಾನದ ಉದ್ಯೋಗ | 40 | 80.00% |
| ಅಪೂರ್ಣ ಉದ್ಯೋಗ | 10 | 20.00% |
| ಪೂರ್ಣ | 00 | 00.00% |
| **ಒಟ್ಟು** | **50** | **100.00%** |

ಈ ಮೇಲಿನ ಕೋಷ್ಟಕದಲ್ಲಿ ಕೃಷಿ ಉದ್ಯೋಗದ ವಿವರಗಳನ್ನು ತಿಳಿಸಲಾಗಿದ್ದು. ಶೇಕಡ 80 ರಷ್ಟು ಮಾಹಿತಿದಾರರುಋತುಮಾನದ ಉದ್ಯೋಗವೆಂತಲೂ, ಶೇಕಡ 20ರಷ್ಟು ಮಾಹಿತಿದಾರರೂ ಅಪೂರ್ಣ ಉದ್ಯೋಗವೆಂತಲೂ ತಿಳಿಸಿರುತ್ತಾರೆ. ಏಕೆಂದರೆ ಭಾರತದ ಕೃಷಿಯು ಮಳೆಯನ್ನಾಧರಿಸಿದೆ ಯಾದ್ದರಿಂದ ಸಂದರ್ಭಕ್ಕೆ ತಕ್ಕಂತೆ ಕೆಲಸಗಳಿರುತ್ತವೆ.

**ಕೋಷ್ಟಕ 05 ಮಾಹಿತಿದಾರರ ಕೆಲಸದ ಕೂಲಿಗೆ ಸಂಬಂಧಿಸಿದ ವಿವರ**

| **ಕೂಲಿಯ ವಿವರ** | **ಆವೃತ್ತಿ** | **ಸರಾಸರಿ** |
|---|---|---|
| ಕಡಿಮೆ ಕೂಲಿ | 35 | 70.00% |
| ಸಾಧಾರಣ ಕೂಲಿ | 15 | 30.00% |
| ಉತ್ತಮ | 00 | 00.00% |
| **ಒಟ್ಟು** | **50** | **100.00%** |

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಕೆಲಸದ ಕೂಲಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಗಿದ್ದು ಪುರುಷ ಕಾರ್ಮಿಕರು ಹಾಗೂ ಮಹಿಳಾ ಕಾರ್ಮಿಕರಿಗೆ ಕೂಲಿಯಲ್ಲಿ ವ್ಯತ್ಯಾಸವಿದೆ. ಶೇಕಡ 70ರಷ್ಟು ಮಹಿಳೆಯರು ಕೆಲಸದ ಕೂಲಿ ಕಡಿಮೆಯಿದೆ ಎಂದಿದ್ದಾರೆ. ಕಂಡು ಬಂದಿದ್ದಾರೆ. ಶೇಕಡ 30ರಷ್ಟು ಮಹಿಳೆಯರು ಸಾಧಾರಣ ಕೂಲಿ ಎಂದಿದ್ದಾರೆ. ಕಾರಣ ಕಡಿಮೆ ದೈಹಿಕ ಶ್ರಮದ ಕೆಲಸಗಳಾದ ಕಳೆ ಕೀಳುವುದು, ಫಸಲು ಕೋಯ್ಯುವುದು ಇವೆಲ್ಲವೂ ಹೆಚ್ಚು ಹೆಚ್ಚಾಗಿ ಮಹಿಳೆಯರೇ ಮಾಡುವ ಕೆಲಸಗಳಾಗಿರುವುದರಿಂದ ಅವರಿಗೆ ಕೂಲಿ ಕಡಿಮೆಯಿದೆ. ಕೂಲಿಯ ವಿಷಯದಲ್ಲಿ ಪುರುಷ ಹಾಗೂ ಮಹಿಳೆಯರಿಗೆ ವ್ಯತ್ಯಾಸವಿದೆ. ಈ ವಿಷಯದಲ್ಲಿ ಮಹಿಳೆಯರು ಶೋಷಣೆಗೆ ಒಳಗಾಗಿದ್ದಾರೆ.

**ಅಧ್ಯಯನದಿಂದ ಲಭ್ಯವಾದ ಅಂಶಗಳು**

- ಈ ಅಧ್ಯಯನದಿಂದ ತಿಳಿದು ಬಂದ ಅಂಶಗಳೇನೆಂದರೆ 35 ವರ್ಷದಿಂದ 55 ವರ್ಷ ವಯಸ್ಸಿನವರ ಪ್ರಮಾಣವೇ ಶೇಕಡ 70ರಷ್ಟಿರುವುದು ಕಂಡುಬಂದಿದೆ.
- ಪರಿಶಿಷ್ಟ ಜಾತಿ ಹಾಗೂ ಪರಿಶಿಸ್ಟ ಪಂಗಡದವರೇ ಶೇಕಡ 80ರಷ್ಟು ಕಂಡುಬಂದಿದ್ದಾರೆ.
- ಶೇಕಡ 90ರಷ್ಟು ಮಹಿಳೆಯರು ಕೃಷಿಕಾರ್ಯಗಳಲ್ಲಿ ತೊಡಗಿರುತ್ತಾರೆ.
- ಕೃಷಿ ಕೂಲಿಯ ಪ್ರಮಾಣ ತುಂಬಾ ಕಡಿಮೆ ಅಂದರೆ ಶೇಕಡ 70ರಷ್ಟು ಕಂಡುಬಂದಿದೆ.
- ಕೃಷಿಯು ಋತುಮಾನದ ಉದ್ಯೋಗವಾಗಿದ್ದು ವರ್ಷಪೂರ್ತಿ ಉದ್ಯೋಗ ಇರುವುದಿಲ್ಲಾ ಎಂಬುದಾಗಿ ಶೇಕಡ 80ರಷ್ಟು ಮಾಹಿತಿದಾರರು ತಿಳಿಸಿರುತ್ತಾರೆ.

**ಸಲಹೆಗಳು**

ಕೃಷಿಯು ಗ್ರಾಮೀಣ ಜೀವನದ ಆಧಾರ, ಗ್ರಾಮೀಣ ಜನರ ಉದ್ಯೋಗ, ಆದಾಯದ ಮೂಲ ಎಲ್ಲವೂ ಕೃಷಿಯೇ ಆಗಿದೆ. ಭೂರಹಿತ ಕೃಷಿ ಕಾರ್ಮಿಕರು ತಮ್ಮ ಕುಟುಂಬದ ನಿರ್ವಹಣೆಗಾಗಿ ಕೃಷಿಕಾರ್ಯಗಳಲ್ಲಿ ಹೆಚ್ಚಾಗಿ ತೊಡಗಿರುವುದು ಕಂಡುಬಂದಿದೆ. ಅದಕ್ಕೆ ಮುಖ್ಯ ಕಾರಣ ಜೀವನ ನಿರ್ವಹಣೆ, ಮಹಿಳೆಯರು ಹೆಚ್ಚು ಹೆಚ್ಚಾಗಿ ಕೃಷಿ ಕಾರ್ಯಗಳಲ್ಲಿ ತೊಡಗಿದ್ದರೂ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ.

- ಕೂಲಿಯ ದರವನ್ನು ಹೆಚ್ಚಿಸುವುದು

- ಕೃಷಿಯ ಜೊತೆಗೆ ಇತರೇ ಸ್ವಾವಲಂಬಿ ಉದ್ಯೋಗಗಳಲ್ಲಿ ತೊಡಗುವುದು
- ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನ
- ತರಬೇತಿ ಅಥವಾ ಉತ್ತಮ ಶಿಕ್ಷಣವನ್ನು ನೀಡುವುದು ಮತ್ತು ಹಣಕಾಸಿನ ನೆರವು ನೀಡುವುದು.
- ಭೂ ಒಡೆತನದ ಹಕ್ಕನ್ನು ಮಹಿಳೆಯರಿಗೂ ನೀಡುವುದು.

**ಪರಾಮರ್ಶನ ಗ್ರಂಥಗಳು:**


- ಎಸ್.ಎಲ್ ದೋಷಿ, ಪಿ.ಸಿ ಜೈನ್, (2019) ರೂರಲ್ ಸೋಶಿಯಾಲಜಿ, ರಾವತ್ ಪಬ್ಲಿಕೇಷನ್ಸ್, ಜೈಪುರ
- ಪ್ರೊ. ಎಂ ನಾರಾಯಣ, (2005) ಗ್ರಾಮೀಣ ಸಮಾಜಶಾಸ್ತ್ರ, ಚೇತನ ಬುಕ್ ಹೌಸ್, ಮೈಸೂರು.
- ಪ್ರೊ. ಕೆ ಭೈರಪ್ಪ (2010) ಪರಿವರ್ತನೆಯಲ್ಲಿನ ಗ್ರಾಮೀಣ ಭಾರತ, ಸಪ್ನ ಬುಕ್ ಹೌಸ್, ಬೆಂಗಳೂರು.
- ಡಾ. ಚ.ನ ಶಂಕರ್ ರಾವ್, (2022) ಭಾರತೀಯ ಗ್ರಾಮ ಜೀವನದ ಸಮಾಜಶಾಸ್ತ್ರ, ಜೈ ಭಾರತ್ ಪ್ರಕಾಶನ ಮಂಗಳೂರು.
- ಚ.ನ ಶಂಕರ್ ರಾವ್, (2023–24) ಅಂಚೀಕರಣಗೊಂಡ ಸಮೂಹಗಳ ಸಮಾಜಶಾಸ್ತ್ರ, ಜೈ ಭಾರತ್ ಪ್ರಕಾಶನ ಮಂಗಳೂರು.
- ದಿನ ಪತ್ರಿಕೆಗಳು: ಪ್ರಜಾವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ವಿಜಯವಾಣಿ, ಇತರೆ.